## 2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ-ನ್ಯಾಯಾಲಯ, ಮದ್ದೂರು

**ಸಿ.ಸಿ.ನಂ. 447/2017**

ಸಾಕ್ಷಿಯ ಹೆಸರು :- ಚಿಕ್ಕರಾಜು
ತಂದೆ/ಗಂಡನ ಹೆಸರು :- ಮರಿಯ್ಯ
ವಯಸ್ಸು :- 49 ವರ್ಷ
ಉದ್ಯೋಗ :- ಕೂಲಿ ಕೆಲಸ
ವಾಸಸ್ಥಳ :- ಹೊನ್ನಲಗೆರೆ ಗ್ರಾಮ

(ಸಾಕ್ಷಿಗೆ ದಿನಾಂಕ: **05.07.2022** ರಂದು ಪ್ರಮಾಣ ವಚನ ಬೋಧಿಸಲಾಯಿತು)

ಸಿಡಬ್ಲ್ಯೂ 2 ಪಿಡಬ್ಲ್ಯೂ .1

**ಮುಖ್ಯ ವಿಚಾರಣೆ:- ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದ**

ಆರೋಪಿತರು ನನಗೆ ಗೊತ್ತು. ಚಾಸಾ-2 ನನ್ನ ಹೆಂಡತಿ. ಚಾಸಾ-3 ನನ್ನ ಅಣ್ಣನ ಮಗ. ಚಾಸಾ-4 ರಿಂದ 7 ನಮ್ಮ ಗ್ರಾಮದವರು.

2. 2017 ರಲ್ಲಿ ಮಧ್ಯಾಹ್ನ 01-00 ಗಂಟೆ ಸಮಯದಲ್ಲಿ, ಆರೋಪಿಗಳು ನಮ್ಮ ಮನೆಯ ಹತ್ತಿರ ಬಂದು ನನಗೆ ಮತ್ತು ಚಾಸಾ-1 ರವರಿಗೆ ಹೊಡೆದಿರುತ್ತಾರೆ. ನನ್ನ ಮೇಲ್ಭಾಗದ ಒಂದು ಹಲ್ಲು ಮುರಿದು ಹೋಗಿರುತ್ತದೆ. ನನ್ನ ನಾಲಿಗೆ ಕಟ್ಟಾಗಿರುತ್ತದೆ. ನಾನು ಮತ್ತು ಚಾಸಾ-1 ರವರು ಮದ್ದೂರು ಪೊಲೀಸ್ ಠಾಣೆಗೆ ಬಂದು ದೂರನ್ನು ನೀಡಿರುತ್ತೇವೆ. ಆರೋಪಿಗಳು ನಾವು ಓಡಾಡುವ ದಾರಿ ಅಡ್ಡಕ್ಕೆ ಶೌಚಾಲಯವನ್ನು ಕಟ್ಟುಕೊಂಡಿದ್ದು, ನಮಗೆ ತಿರುಗಾಡಲು ಜಾಗವಿರುವುದಿಲ್ಲ. ಆರೋಪಿಗಳು ನನಗೆ ಕೆಟ್ಟ ಮಾತುಗಳಿಂದ ಸೂಳೇ, ಬಡ್ಡೀ, ನಿಮ್ಮಪ್ಪ ಕೊಟ್ಟಿದ್ದಾನಾ ಜಾಗವನ್ನು ಎಂದು ಬೈದಿರುತ್ತಾರೆ. ಆರೋಪಿತರೆಲ್ಲರೂ ನಮ್ಮ ಗ್ರಾಮದಲ್ಲಿ ವಾಸವಾಗಿರುವುದಿಲ್ಲ. ಒಬ್ಬರು ಮೈಸೂರಿನಲ್ಲಿ ಮತ್ತೊಬ್ಬರು ಚನ್ನಪಟ್ಟಣದಲ್ಲಿ, ಮತ್ತೊಬ್ಬರು ಮದ್ದೂರಿನಲ್ಲಿ ಹಾಗೂ ಬೇರೆ ಬೇರೆ ಕಡೆ ವಾಸವಾಗಿದ್ದು, ಊರಿಗೆ ಬಂದಾಗೆಲ್ಲಾ ನಮಗೆ ಕಿರುಕುಳ ನೀಡುತ್ತಾರೆ ನಾವು ಅಲ್ಲಿಗೆ ಹೋಗಲು ಅವಕಾಶ ನೀಡುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ.ಸ.ಅ ರವರು, ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂ:-**

1. ದಿ: 01/05/2016 ರಂದು ಸಂಜೆ 05-00 ಗಂಟೆ ಸಮಯದಲ್ಲಿ, ಚಾಸಾ-1 ರವರು ಕಸ ಸುರಿಯಲು ತಿಪ್ಪೇಗೆ ಹೋಗುವಾಗ ಗಲಾಟೆ ಆಗಿರುತ್ತದೆ ಎಂದರೆ ಸರಿ. ನನಗೆ ಹೃದಯ

ಶಸ್ತ್ರ ಚಿಕಿತ್ಸೆ ಆಗಿರುತ್ತದೆ ಎಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರನ್ನು ಕುರಿತು ನಿನ್ನ ಗಂಡನಿಗೆ ಹಾರ್ಟ್ ಆಪರೇಷನ್ ಆಗಿದ್ದು ಅವನ ಕೈಯಲ್ಲಿ ಏನು ಆಗುವುದಿಲ್ಲ ಬಾ ನನ್ನ ಹತ್ತಿರ ಎಂದು ಕರೆದನು ಎಂದರೆ ಸರಿ. ಅದಕ್ಕೆ ಚಾಸಾ-1 ರವರು ನಾನು ನಡತೆಗೆಟ್ಟ ಹೆಂಗಸೆಲ್ಲಾ ಎಂದು ಹೇಳಿರುತ್ತಾರೆಂದರೆ ಸರಿ. ನಂತರ ಆರೋಪಿಗಳೆಲ್ಲರೂ ಬಂದು ಚಾಸಾ-1 ರವರಿಗೆ ಸೂಳೇ ಮುಂಡೆ ಎಂದು ಬೈದಿರುತ್ತಾರೆಂದರೆ ಸರಿ. ನಂತರ 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ಸೀರೆಯನ್ನು ಹಿಡಿದು ಎಳೆದಾಡಿರುತ್ತಾರೆಂದರೆ ಸರಿ. ನಾನು ಬಿಡಿಸಲು ಹೋದಾಗ 2 ನೇ ಆರೋಪಿಯು ದೊಣ್ಣೆಯಿಂದ ನನ್ನ ಬೆನ್ನಿನ ಮೇಲೆ ಹೊಡೆದನು ಎಂದರೆ ಸರಿ. ನಂತರ ಚಾಸಾ-1 ರವರು ಬಾಯಿ ಬಡಿದುಕೊಂಡಾಗ, 5 ರಿಂದ 8 ನೇ ಆರೋಪಿತರು ಚಾಸಾ-1 ರವರನ್ನು ನೆಲಕ್ಕೆ ಕೆಡವಿ, ಸಾಯಿ ಸೂಳೇ ಮುಂಡೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ನಂತರ ಚಾಸಾ-1 ರವರಿಗೆ ಆರೋಪಿಗಳೆಲ್ಲರೂ ಮೈ ಮೇಲೆ ತುಳಿದಿರುತ್ತಾರೆಂದರೆ ಸರಿ. ನಮ್ಮ ಊರಿನ ಚಾಸಾ-3 ಮತ್ತು 4 ರವರು ಗಲಾಟೆ ಬಿಡಿಸಿರುತ್ತಾರೆಂದರೆ ಸರಿ. ನಾನು ಮತ್ತು ಚಾಸಾ-1 ರವರು ಮದ್ದೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿ. ನನಗೆ ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಕಳುಹಿಸಿದರು ಎಂದರೆ ಸರಿ. ಈಗ ನ್ಯಾಯಾಲಯದ ಮುಂದೆಯಿರುವ ದೊಣ್ಣೆಯಿಂದ ನನಗೆ ಹೊಡೆದಿರುತ್ತಾರೆಂದರೆ ಸರಿ. ನನಗೆ 2 ನೇ ಆರೋಪಿ ಸದರಿ ದೊಣ್ಣೆಯಿಂದ ಹೊಡೆದಿರುತ್ತಾರೆ. 3 ನೇ ಆರೋಪಿ ಈಗ ನ್ಯಾಯಾಲಯದ ಮುಂದೆಯಿರುವ ಕಲ್ಲಿನಿಂದ ಹೊಡೆದಿರುತ್ತಾರೆ. ಸದರಿ ದೊಣ್ಣೆಯನ್ನು ಮು ಮ-1 ಎಂದು, ಕಲ್ಲನ್ನು ಮು ಮ-2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ವಿ ವಕೀಲರು ಸಮಯ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ

(ಕಿರಣ್ ಎಸ್. ಪಿ.)

**2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಂ.ಎಫ್.ಸಿ ನ್ಯಾಯಾಧೀಶರು**

**ಮದ್ದೂರು.**